

# ಬ್ಯುಸಿ ಅಮೀರ್

ಅಮೀರ್ ಖಾನ್ ಗೆ ಬಾಲಿವುಡ್‌ನಲ್ಲಿ ಮಿಸ್ಟರ್ ಪರ್ಫೆಕ್ಷನ್ ಎಂಬ ಹೆಸರು ಬರಲು, ಆತ ವರ್ಷದಲ್ಲಿ ಒಂದು ಅಥವಾ ಎರಡು ಚಿತ್ರಗಳಲ್ಲಿ ಮಾತ್ರ ನಟಿಸೋದು ಕಾರಣ. ಹೀಗೆ ನಟಿಸಿದರೆ ಆ ಚಿತ್ರಕ್ಕೆ ತನ್ನನ್ನು ತಾನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಬಹುದು ಎನ್ನುವುದು ಅಮೀರ್ ಬಯಕೆ. ಈ ರೀತಿಯ ಪರಿಪೂರ್ಣತೆಯಿಂದಾಗಿಯೇ ಆತ ನಟಿಸಿದ ಬಹುತೇಕ ಚಿತ್ರಗಳು 'ಸೂಪರ್‌ಹಿಟ್' ಆಗಿವೆ.

ಅಮೀರ್ ನಟಿಸುತ್ತಿರುವ ನಾಲ್ಕು ಚಿತ್ರಗಳು ಮುಂದಿನ 2–3 ವರ್ಷಗಳಲ್ಲಿ ತೆರೆಗೆ ಬರುವ ಸಿದ್ಧತೆಯಲ್ಲಿವೆ. ಅಮೀರ್‌ನ 'ದಂಗಲ್' ಚಿತ್ರದಲ್ಲಿ ಮಗಳಾಗಿ ನಟಿಸಿದ ಜೈರಾ ವಾಸಿಂ ಮುಖ್ಯ ಪಾತ್ರದಲ್ಲಿರುವ 'ಸೀಕ್ರೆಟ್ ಸೂಪರ್‌ಸ್ಟಾರ್' ಚಿತ್ರದಲ್ಲಿ ಅಮೀರ್ ವಿಶೇಷ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾನೆ. ಈ ಚಿತ್ರ ದೀಪಾವಳಿಗೆ ತೆರೆಗೆ ಬರಲಿದೆ.

ಅಮಿತಾಭ್ ಜತೆಗೆ ಅಮೀರ್ ನಟಿಸುತ್ತಿರುವ 'ಥಗ್ಸ್ ಆಫ್ ಹಿಂದೂಸ್ತಾನ್' 2018ರಲ್ಲಿ ತೆರೆಗೆ ಬರಲಿದೆ. ಭಾರತೀಯ ವಾಯುಪಡೆಯ ಪೈಲಟ್ ರಾಕೇಶ್ ಶರ್ಮಾ ಜೀವನ ಆಧಾರಿತ 'ಸೆಲ್ಯೂಟ್' ಮೂರನೆಯ ಚಿತ್ರ. ಅದರ ಬೆನ್ನಲ್ಲೆ 'ಸರ್ಫರೋಜ್' ಚಿತ್ರದ ಎರಡನೆ ಭಾಗದ ಚಿತ್ರಕಥೆಯೂ ರೆಡಿ ಆಗಿದೆಯಂತೆ. 1999ರಲ್ಲಿ ಸೂಪರ್‌ಹಿಟ್ ಆದ 'ಸರ್ಫರೋಜ್' ನಲ್ಲಿ ನಾಸಿರುದ್ದೀನ್ ಷಾ ವಿಲ್ಲನ್ ಪಾತ್ರ ವಹಿಸಿದ್ದರು. 2ನೇ ಭಾಗದಲ್ಲಿ ಯಾರಿರುತ್ತಾರೋ ಕಾದು ನೋಡಬೇಕು.

■ ಬಿಂದು

